CW.14 PW.6

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.794/2024

| | |
|---|---|
| ಸಾಕ್ಷಿದಾರರ ಹೆಸರು | ಕೃಷ್ಣ ಕೆ ಎಲ್ |
| ತಂದೆಯ ಹೆಸರು | ಕೇಮಪ್ಪ |
| ವಯಸ್ಸು | 49 ವರ್ಷ |
| ವೃತ್ತಿ | ಡಿ ವೈ ಎಸ್ ಪಿ, ಡಿ ಸಿ ಆರ್ ಇ, ಈಸ್ಟ ಪೋಲೀಸ್ ಠಾಣೆ, ಶಾಂತಿನಗರ ಬೆಂಗಳೂರು |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 14.07.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 06.08.2022 ರಿಂದ 13.01.2025 ರವರೆಗೂ ವೃತ್ತ ನಿರೀಕ್ಷಕರು, ಕನಕಪುರ ಇಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿದ್ದು ಕೋಡಿಹಳ್ಳಿ ಠಾಣೆಯು ನನ್ನ ವ್ಯಾಪ್ತಿಗೆ ಬರುತ್ತಿತ್ತು.

ಆರೋಪಿಯನ್ನು ನಾನು ನೋಡಿರುತ್ತೇನೆ. ಈ ದಿನ ಹಾಜರಿರುತ್ತಾರೆ.

ದಿಃ 01.03.2024 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಸಾಕ್ಷಿಗಳಾದ ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ28.03.2024 ರಂದು ಕೆಎ-04-ಜೆಎಲ್-722 ಹಾಗೂ ಕೆಎ-03-ಇಎ-5042 ಇವುಗಳ ಐಎಂವಿ ವರದಿ ನೀಡುವಂತೆ ಚಾಸಾ-10 ರವರಿಗೆ ಮನವಿ ಮಾಡಿರುತ್ತೇನೆ. ದಿಃ02.05.2024 ರಂದು ಆರೋಪಿಯು ಕಚೇರಿಗೆ ಕೆಎ-04-ಜೆ ಎಲ್ -7222 ವಾಹನದ ದಾಖಲಾತಿಗಳೊಟ್ಟಿಗೆ ಹಾಜರಾಗಿದ್ದು

ಸದರಿಯವರಿಗೆ ಕಾಯ್ದೆ ಅನುಸಾರ ನೊಟೀಸು ಜಾರಿ ಮಾಡಿ ಪ್ರತ್ಯುತ್ತರವನ್ನು ಪಡೆದುಕೊಂಡಿರುತ್ತೇನೆ. ಹಾಗೂ ಆರೋಪಿಯ ದಸ್ತಗಿರಿ ನಿಯಾಮಾವಳಿಯನ್ನು ಪಾಲಿಸಿ ಜಾಮಿನಿನ ಮೇಲೆ ಬಿಡುಗೆ ಮಾಡಿರುತ್ತೇನೆ.

ದಿಃ04.05.2024 ರಂದು ಮೃತನ ಪಿ ಎಂ ವರದಿಯ್ನು ಚಾಸಾ-11 ರವರಿಂದ ಪಡೆದಿರುತ್ತೇನೆ. ದಿಃ03.06.2024 ರಂದು ಆರೋಪಿಯು ಠಾಣೆಗೆ ಹಾಜರಾಗಿ ಸೂಕ್ತ ಇಂಡಿನಿಟಿ ಬಾಂಡ್ ನೀಡಿದ ಮೇರೆಗೆ ಆತನ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ.

ದಿಃ28.06.2024 ರಂದು ಚಾಸಾ-10 ರವರಿಂದ ಐಎಂವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸೂಕ್ತ ಸಾಕ್ಷ್ಯ ಇದ್ದ ಕಾರಣ ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಚಾಸಾ-2 ಮತ್ತು 3 ರವರ ಹೆಳಿಕೆಗಳನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ದಾಖಲಾತಿಗಳು ಈಗಾಗಲೇ ನಿಪಿ-3 ಮತ್ತು 4 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ನೊಟೀಸನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಅದಕ್ಕ ನೀಡಿರುವ ಪ್ರತ್ಯುತ್ತವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಇಂಡಿನಿಟಿ ಬಾಂಡ್ ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

CW.14 PW.6

ಸಾಕ್ಷಿಗೆ ಸದರಿ ಪ್ರಕರಣದ ಪಿ ಎಂ ವರದಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಐಎಂ ವಿ ವರದಿಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಸದರಿ ಪ್ರಕರಣದಲ್ಲಿ ಸೂಕ್ತ ರೀತಿ ತನಿಖೆ ಮಾಡದೇ ಯಾವುದೆ ವಾಹನಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈಗ ನಿಶಾನೆಗಳನ್ನಾಗಿ ಹಾಜರು ಪಡಿಸಿರುವ ದಾಖಲಾತಿಗಳು ಕೇವಲ ಪ್ರಕರಣಕ್ಕೆ ಅನುಕೂಲವಾಗುವ ರೀತಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಪರಿಹಾರ ಬರಲಿ ಎಂಬ ಉದ್ದೇಶದಿಂದ ಆರೋಪಿ ತಪ್ಪು ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**